

# ವೈಯಕ್ತಿಕತೆಯಿಂದ ಮಾನವೀಯತೆಯೆಡೆಗೆ

ಸ್ವಾಮಿ ರಂಗನಾಥಾನಂದ

**ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿರುವರು. ಅವರ *Eternal Values for a Changing Society* ಎಂಬ ಪ್ರಸಿದ್ಧ ಗ್ರಂಥದ ಕನ್ನಡ ರೂಪವಾದ 'ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು' ಪುಸ್ತಕದಿಂದ ಆಯ್ದ ಭಾಗವಿದು.**

**ಭಾರತದ** ಪುರಾತನ ಶ್ರೇಷ್ಠ ತತ್ತ್ವವಾದ ವೇದಾಂತದ ದೃಷ್ಟಿ ಸಮಗ್ರ ಮಾನವಾಭಿವೃದ್ಧಿ. ಮಾನವಾಭಿವೃದ್ಧಿಯ ಪ್ರಥಮ ಆವಿರ್ಭಾವವು ಲೌಕಿಕ ಕ್ಷೇತ್ರದಲ್ಲಿ ಆಗುತ್ತದೆ.

## ಎರಡು ವಾತಾವರಣಗಳು

ಮಾನವನು ಪ್ರಾಕೃತಿಕ ಮತ್ತು ಸಾಮಾಜಿಕ ಎಂಬ ಎರಡು ವಾತಾವರಣಗಳಿಂದ ಸುತ್ತುವರಿದಿದ್ದಾನೆ. ಪ್ರಾಕೃತಿಕ ವಾತಾವರಣವನ್ನು ತನಗೆ ಸುಖವನ್ನೂ ತೃಪ್ತಿಯನ್ನೂ ನೀಡುವ ವಸ್ತುಗಳಾಗಿ ಉಪಯೋಗಿಸುತ್ತಾನೆ. ಗಾಳಿ, ನೀರು, ಬೆಳಕು, ನದಿ, ಮರಗಳು, ಮೇಜು, ಕುರ್ಚಿ, ಮನೆ, ಪ್ರಾಣಿ ಇತ್ಯಾದಿಗಳು ಮಾನವನು ತನ್ನ ತೃಪ್ತಿಗೆ ಮತ್ತು ಬೆಳವಣಿಗೆಗೆ ಬಳಸಿಕೊಳ್ಳುವ ಪ್ರಾಕೃತಿಕ ವಸ್ತುಗಳ ವರ್ಗಕ್ಕೆ ಸೇರುತ್ತವೆ. ಇವೆಲ್ಲ ಅವನ ಬಳಕೆಯ ವಸ್ತುಗಳು. ಇವುಗಳನ್ನು ಅತಿಯಾಗಿ ಬಳಸಿ ವಾತಾವರಣದ ಸಮತೋಲನವನ್ನು ಕೆಡಿಸದಿದ್ದರೆ, ಮಾನವನು ಇವುಗಳನ್ನು ತನಗಾಗಿ ಉಪಯೋಗಿಸುವುದು ತಪ್ಪೇನಿಲ್ಲ. ಆದರೆ ಪ್ರಾರಂಭದ ಹಂತದಲ್ಲಿ ವ್ಯಕ್ತಿಯು ಸಾಮಾಜಿಕ ವಾತಾವರಣವಾದ ಇತರ ಮಾನವರನ್ನೂ ತನ್ನ ಬಳಕೆಯ ವಸ್ತುಗಳಾಗಿ ಪರಿಗಣಿಸುತ್ತಾನೆ. ತನ್ನ ಮಡದಿ, ಮಕ್ಕಳು, ಆಳು ನೆರೆಹೊರೆಯವರೆಲ್ಲರನ್ನೂ ತನ್ನ ಸುಖಕ್ಕಾಗಿ, ತನ್ನ ತೃಪ್ತಿಗಾಗಿ ಉಪಯೋಗಿಸಿಕೊಳ್ಳುತ್ತಾನೆ. ಅವರೆಲ್ಲರೂ ಅವನ ಭೋಗವಸ್ತುಗಳಾಗುತ್ತಾರೆ. ಗುಲಾಮಗಿರಿ ಮತ್ತು ಎಲ್ಲ ಬಗೆಯ ಮಾನವ ಶೋಷಣೆಗಳಿಗೂ ಈ ಪ್ರಜ್ಞಾಸ್ಥಿತಿಯೇ ಕಾರಣ. ಇತರ ಮಾನವರನ್ನು ತನ್ನ ಭೋಗವಸ್ತುಗಳಾಗಿ ಪರಿಗಣಿಸದೆ ತನ್ನಂತೆಯೇ ವ್ಯಕ್ತಿಗಳೆಂದು ಪರಿಗಣಿಸುವಂತೆ ಮಾನವನಿಗೆ ತರಬೇತಿಯನ್ನು ನೀಡುವುದೇ ಲೌಕಿಕ ಶಿಕ್ಷಣದ ಉದ್ದೇಶ. ಈ ಹಂತದಲ್ಲಿ ಪ್ರಜ್ಞೆಯು ನೈತಿಕ ಹಂತಕ್ಕೆ ಏರಿ, ನೈತಿಕ ಭಾವದಿಂದ ಪರಿಪಕ್ವವಾಗುತ್ತದೆ. ಇದನ್ನು ಸಾಮಾಜಿಕ ವಸ್ತುವಿನಲ್ಲಿ ಒಂದು ವ್ಯಕ್ತಿಯನ್ನು ಗುರುತಿಸುವ ಸಾಮರ್ಥ್ಯ ಎಂದು ವಿವರಿಸಬಹುದು. ಪ್ರಜ್ಞೆಯನ್ನು ಸ್ವಲ್ಪಮಟ್ಟಿಗಾದರೂ ನೈತಿಕ ಹಂತಕ್ಕೆ ಏರಿಸದೆ ಯಾವ ಸಮಾಜವೂ ಉಳಿಯಲಾರದು. ಭಾರತೀಯ ತತ್ತ್ವಶಾಸ್ತ್ರವು ಈ ನೈತಿಕ ಪ್ರಜ್ಞೆಯನ್ನು ಧರ್ಮ ಎಂದು ಕರೆಯುತ್ತದೆ. ಈ ಮೌಲ್ಯವು ಮನುಷ್ಯ ಮನುಷ್ಯನನ್ನು ಕೂಡಿಸಿ ಒಂದು ಸಮಾಜವು ರೂಪಿತವಾಗುವಂತೆ ಮಾಡುತ್ತದೆ. ಒಂದು ಕಟ್ಟಡ ನಿರ್ಮಾಣದಲ್ಲಿ ಇಟ್ಟಿಗೆಗಳನ್ನು ಒಂದುಗೂಡಿಸುವ ಸಿಮೆಂಟಿನಂತೆ ಇದು ಕೆಲಸ ಮಾಡುತ್ತದೆ. ಮಾನವರ ಕೇವಲ ಮಿಶ್ರಣದಿಂದ ಒಂದು ಸಮಾಜವಾಗುವುದಿಲ್ಲ. ಇಟ್ಟಿಗೆಗಳ ಸಂಗ್ರಹದಿಂದ ಕಟ್ಟಡ ನಿರ್ಮಾಣವಾಗುವುದಿಲ್ಲ. ಭಾರತೀಯ ಮಹಾಕಾವ್ಯ 'ಮಹಾಭಾರತವು' ನೀಡುವ ಈ ಕೆಳಗಿನ ವಿವರಣೆ ಪ್ರಸಿದ್ಧವಾದುದು :

**ಇತರ ಮಾನವರನ್ನು ಕೇವಲ ವಸ್ತುಗಳಾಗಿ ಪರಿಗಣಿಸದೆ ವ್ಯಕ್ತಿಗಳಾಗಿ ಪರಿಗಣಿಸುವ ಸಾಮರ್ಥ್ಯವನ್ನು ಜನರೆಲ್ಲರೂ ಬೆಳೆಸಿಕೊಳ್ಳಬೇಕು.**

**ಧಾರಣಾತ್ ಧರ್ಮ ಇತ್ಯಾಹುಃ**
**ಧರ್ಮೋ ಧಾರಯತೇ ಪ್ರಜಾಃ ||**

'ಧರ್ಮವು ಪರಸ್ಪರ ಒಂದುಗೂಡಿಸುವುದರಿಂದ ಅದನ್ನು ಆ ಹೆಸರಿನಿಂದ ಕರೆಯಲಾಗಿದೆ. ಧರ್ಮವು ಪ್ರಜೆಗಳನ್ನು ಒಂದುಗೂಡಿಸುತ್ತದೆ, ' (ಕರ್ಣಪರ್ವ, ಅ.೪೫-೫೦).

ಇತರ ಮಾನವರನ್ನು ಕೇವಲ ವಸ್ತುಗಳಾಗಿ ಪರಿಗಣಿಸದೆ ವ್ಯಕ್ತಿಗಳಾಗಿ ಪರಿಗಣಿಸುವ ಸಾಮರ್ಥ್ಯವನ್ನು ಜನರೆಲ್ಲರೂ ಬೆಳೆಸಿಕೊಳ್ಳಬೇಕು. ಆಗ ಇಡೀ ಮಾನವಕೋಟಿಯು ನೈತಿಕ ಪ್ರಜ್ಞೆಯ ಮತ್ತು ಮಾನವೀಯ ಕಳಕಳಿಯ ಹಂತಕ್ಕೆ ಏರುತ್ತದೆ. ಇದರಿಂದ ಮಾನವ ವಿಕಾಸದಲ್ಲಿ ಒಂದು ಅದ್ಭುತ ಮುನ್ನಡೆಯನ್ನು ಸಾಧಿಸಿದಂತಾಗುತ್ತದೆ. ಮಾನವ ಹಂತದಲ್ಲಿ ವಿಕಾಸದ ಒಂದು ನಿಜವಾದ ಅರ್ಥವನ್ನು ಮತ್ತು ದಿಕ್ಕನ್ನು ನಾವು ಕಾಣುವುದು ಇಲ್ಲಿಯೇ.

## ಮನೋ-ಸಾಮಾಜಿಕ ವಿಕಾಸ

**ಹತ್ತೊಂಬತ್ತನೇ ಶತಮಾನದ ಜೀವಶಾಸ್ತ್ರದಂತಲ್ಲದೆ, ಇಪ್ಪತ್ತನೆ ಶತಮಾನದ ಜೀವಶಾಸ್ತ್ರವು ವಿಕಾಸದಲ್ಲಿ ಒಂದು ನೈತಿಕಾಂಶವನ್ನು**

ಗುರುತಿಸುತ್ತದೆ. ಜೈವಿಕ ಹಂತದಿಂದ ಆಧ್ಯಾತ್ಮಿಕ ಹಂತಕ್ಕೆ ಏರಿಸುವ ಈ ನೈತಿಕ ವಿಕಾಸವನ್ನು ಮನೋ-ಸಾಮಾಜಿಕ ವಿಕಾಸ ಎಂದು ಅದು ಕರೆಯುತ್ತದೆ. ಹತ್ತೊಂಬತ್ತನೆ ಶತಮಾನದ ಜೀವಶಾಸ್ತ್ರವು ಮಾನವ ಹಂತದ ವಿಕಾಸವನ್ನು ಇತರ ಪ್ರಾಣಿಗಳ ಹಂತದ ವಿಕಾಸದಂತೆಯೇ ಪರಿಗಣಿಸಿತು. ಪ್ರಾಣಿಗಳ ಹಂತದಲ್ಲಿ ಇಂದ್ರಿಯ ತೃಪ್ತಿ, ಸಂತತಿ ವೃದ್ಧಿ ಮತ್ತು ಜೀವಧಾರಣೆ—ಇವಿಷ್ಟೇ ಮುಖ್ಯ ಗುರಿಯಾಗಿರುತ್ತದೆ. ಇಂದಿನ ಜೀವಶಾಸ್ತ್ರವು, ಮನುಷ್ಯನ ಮಟ್ಟಿಗೆ ಹೇಳುವುದಾದರೆ, ಈ ಮೂರು ಗುರಿಗಳು ಗೌಣ ಎಂದು ಹೇಳುತ್ತದೆ. ಮಾನವ ಹಂತದಲ್ಲಿ ಬೇರೊಂದು ಅಂಶ ಪ್ರಧಾನವಾಗುತ್ತದೆ. ಜೈವಿಕ ಮಿತಿಗಳನ್ನು ಮೀರಿಹೋಗಿ ಸಾರ್ಥಕತೆಯನ್ನು ಪಡೆಯುವುದೇ ಆ ಪ್ರಧಾನ ಅಂಶ. ಜೈವಿಕ ನಿಯಂತ್ರಣಕ್ಕೆ ಬದ್ಧವಾದ ತನ್ನ ಪ್ರಜ್ಞೆಯನ್ನು ಉನ್ನತಸ್ತರಕ್ಕೆ ಏರಿಸುವ ಸಾಮರ್ಥ್ಯವನ್ನು ಪ್ರಕೃತಿಯು ಮಾನವನಿಗೆ ನೀಡಿರುವುದು. ಈ ಸಾಮರ್ಥ್ಯವನ್ನು ಉಪಯೋಗಿಸಿದಾಗಲೇ ತನ್ನೊಳಗಿರುವ ಅಪಾರ ಸಾಧ್ಯತೆಗಳ ಅರಿವು ಮಾನವನಿಗಾಗುತ್ತದೆ. ಮನೋ-ಸಾಮಾಜಿಕ ವಿಕಾಸವು ಈ ಸಾಧ್ಯತೆಗಳ ಅಭಿವ್ಯಕ್ತಿಯಲ್ಲಿ ಮೊದಲನೆಯ ಹಂತ.

ಇಪ್ಪತ್ತನೆ ಶತಮಾನದ ಜೀವಶಾಸ್ತ್ರದಲ್ಲಿ ಇದು ಆಶಾಭಾವವನ್ನು ಹುಟ್ಟಿಸುವ ಅತ್ಯಂತ ಮುಖ್ಯ ಭಾವನೆಯಾಗಿದೆ. ಮಾನವನ ಮಿದುಳಿನಲ್ಲಿ ಪ್ರಕೃತಿಯು ಈ ಎಲ್ಲಾ ಸಾಮರ್ಥ್ಯಗಳನ್ನು ನೀಡಿರುವುದು. ತನ್ನ ಉಳಿವಿಗಾಗಿ ಹೊಸ ಅಂಗಗಳನ್ನು ನಿರ್ಮಿಸಲು ಅವನು ಪ್ರಕೃತಿಯನ್ನು ಅವಲಂಬಿಸಬೇಕಾಗಿಲ್ಲ. ತನಗೆ ಬೇಕಾದ ಯಾವುದೇ ಅಂಶಗಳನ್ನು ತನ್ನ ಹೊರಗೆ ನಿರ್ಮಿಸಲು ಮಿದುಳು ಅವನಿಗೆ ಸಹಾಯ ಮಾಡುತ್ತದೆ. ಅವನು ಪ್ರಕೃತಿಗಿಂತಲೂ ಶೀಘ್ರವಾಗಿ ಹಾಗೂ ಉತ್ತಮವಾಗಿ ಅವನ್ನು ನಿರ್ಮಿಸಬಲ್ಲ. ಈ ಅಪೂರ್ವ ಅಂಗವಾದ ಮಿದುಳನ್ನು ಕೇವಲ ತನ್ನ ಉಳಿವಿಗಾಗಿ ಅಥವಾ ಇಂದ್ರಿಯ ತೃಪ್ತಿಗಾಗಿ ಮಾತ್ರವಲ್ಲದೆ ಉನ್ನತ ಉದ್ದೇಶಗಳಿಗಾಗಿ ಉಪಯೋಗಿಸಬೇಕೆಂಬುದು ಪ್ರಕೃತಿಯ ಉದ್ದೇಶ. ಈ ಉನ್ನತ ಉದ್ದೇಶಗಳು ಯಾವುವು? ಅವು ವಿವಿಧ ಮನೋ-ಸಾಮಾಜಿಕ ವಿಕಾಸವೆಂದು ಜೀವಶಾಸ್ತ್ರ ಹೇಳುತ್ತದೆ. ಈ ಅಭಿಪ್ರಾಯದಿಂದಾಗಿ ಜೀವಶಾಸ್ತ್ರವು ಪ್ರಧಾನ ವಿಶ್ವಧರ್ಮಗಳ ನೈತಿಕ ಮತ್ತು ಆಧ್ಯಾತ್ಮಿಕ ಭಾವನೆಗಳ ಸಮೀಪಕ್ಕೆ ಬರುವಂತಾಗಿದೆ. ಭೌತಿಕ ಮತ್ತು ಮಾನಸಿಕ ಬೆಳವಣಿಗೆಯ ಜೊತೆಗೆ ಮಾನವನು ಆಧ್ಯಾತ್ಮಿಕ ಬೆಳವಣಿಗೆಯನ್ನೂ ಹೊಂದಿರುವನು. ಅವನು ಮಾತ್ರ ಈ ಸಾಧ್ಯತೆಯನ್ನು ಪಡೆದಿರುವುದು. ಪ್ರಜ್ಞೆಯನ್ನು ಉನ್ನತೋನ್ನತ ಮಟ್ಟಕ್ಕೆ ಏರಿಸುವ ಈ ಪ್ರಕ್ರಿಯೆಯನ್ನೇ ವೇದಾಂತವು ಮಾನವನ ಆಧ್ಯಾತ್ಮಿಕ ಬೆಳವಣಿಗೆ ಮತ್ತು ಸಫಲತೆ ಅಥವಾ ಸಾರ್ಥಕತೆ ಎಂದು ಕರೆಯುತ್ತದೆ.

## ವೈಯಕ್ತಿಕ ಪ್ರಜ್ಞೆ

ಈ ಆಧ್ಯಾತ್ಮಿಕ ಬೆಳವಣಿಗೆಯ ಮೂಲಕ ವ್ಯಕ್ತಿಯಲ್ಲಿ ಅದ್ಭುತ ಆಂತರಿಕ ಪರಿವರ್ತನೆಯುಂಟಾಗುತ್ತದೆ. ಪ್ರಾರಂಭದಲ್ಲಿ ಅವನ ಗಮನವೆಲ್ಲ ಶರೀರದ ಕಡೆಗೇ ಇರುತ್ತದೆ. ಆಧ್ಯಾತ್ಮಿಕ ಬೆಳವಣಿಗೆ ಅಥವಾ ಮನೋ-ಸಾಮಾಜಿಕ ವಿಕಾಸದಿಂದ ಅವನು ತನ್ನ ಶಾರೀರಿಕ ಮಿತಿಯನ್ನು ಮೀರಿಹೋಗುತ್ತಾನೆ, ಮತ್ತು ಪ್ರೀತಿ, ದಯೆ, ಸಹಾನುಭೂತಿ, ಆತ್ಮಾರ್ಪಣೆ ಮುಂತಾದ ಗುಣಗಳ ಮೂಲಕ ತನ್ನನ್ನು ತಾನು ವಿಸ್ತರಿಸಿಕೊಳ್ಳುತ್ತಾನೆ. ಈ ರೀತಿ ವಿಸ್ತಾರಗೊಳ್ಳುವುದೇ ಆಧ್ಯಾತ್ಮಿಕ ವಿಕಾಸ. ಇದು ಅವನಿಗೆ ಇತರರೊಡನೆ ಸ್ಪಂದಿಸುವ ಮತ್ತು ಸುಖಪ್ರದ ಹಾಗೂ ಫಲಪ್ರದ ಸಂಬಂಧವನ್ನು ಹೊಂದುವ ಸಾಮರ್ಥ್ಯವನ್ನು ನೀಡುತ್ತದೆ. ಮಾನವನ ಹಂತದಲ್ಲಿ ಪ್ರಜ್ಞೆಯನ್ನು ಉನ್ನತ ಮಟ್ಟಕ್ಕೆ ಏರಿಸುವ ಮೊದಲನೆಯ ಮೆಟ್ಟಿಲು ಇದು. ಇಲ್ಲಿಂದಲೇ ಮನೋ-ಸಾಮಾಜಿಕ ವಿಕಾಸವು ಪ್ರಾರಂಭವಾಗುತ್ತದೆ. ಮೊದಲೇ ಸೂಚಿಸಿದಂತೆ ಪ್ರಜ್ಞೆಯ ಎರಡು ಹಂತಗಳನ್ನು ನಿರ್ದೇಶಿಸುವ ಎರಡು ಬಗೆಯ ಶಬ್ದಗಳನ್ನು ಉಪಯೋಗಿಸಲಾಗಿದೆ. ಅವಾವುದೆಂದರೆ **ವೈಯಕ್ತಿಕತೆ** ಮತ್ತು **ಮಾನವೀಯತೆ.** ನನ್ನನ್ನು ನಾನು ವ್ಯಕ್ತಿಯಾಗಿ ಪರಿಗಣಿಸಿಕೊಂಡು ಇತರರೆಲ್ಲರನ್ನೂ ವಸ್ತುಗಳನ್ನಾಗಿ ಪರಿಗಣಿಸಿದರೆ, ನನ್ನ ಸ್ವಾತಂತ್ರ್ಯಕ್ಕೆ ಮಾತ್ರ ಬೆಲೆಯನ್ನು ಕೊಟ್ಟು, ಇತರರ ಸ್ವಾತಂತ್ರ್ಯವನ್ನು ಸ್ವಲ್ಪವೂ ಲೆಕ್ಕಿಸದಿದ್ದರೆ, ನಾನು ಕೇವಲ ವೈಯಕ್ತಿಕ ಹಂತದಲ್ಲಿಯೇ ಉಳಿಯುತ್ತೇನೆ—ನನ್ನ ಪ್ರಜ್ಞೆ ನನ್ನ ವ್ಯಕ್ತಿತ್ವಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಇತರರ ಸ್ವಾತಂತ್ರ್ಯವನ್ನು ಪರಿಭಾವಿಸುವ ಶಕ್ತಿ ಅದಕ್ಕಿರುವುದಿಲ್ಲ.

> **ವ್ಯಕ್ತಿತ್ವದ ಬೆಲೆಯನ್ನೂ ಸ್ವಾತಂತ್ರ್ಯವನ್ನೂ ಘನತೆಯನ್ನೂ ಬೆಳಸಿಕೊಳ್ಳುವುದು ಆಧ್ಯಾತ್ಮಿಕ ಬೆಳವಣಿಗೆಯ ಮೊದಲ ಹಂತ.**

ಈ ವೈಯಕ್ತಿಕ ಪ್ರಜ್ಞೆಯನ್ನು ನಾವು ಮಕ್ಕಳಲ್ಲಿ ಕಾಣಬಹುದು. ಮಕ್ಕಳಲ್ಲಿ ಈ ವೈಯಕ್ತಿಕ ಪ್ರಜ್ಞೆಯನ್ನು ಬಲಗೊಳಿಸಲು ನಾವು ಸರ್ವಪ್ರಯತ್ನ ಮಾಡುತ್ತೇವೆ. ಇದು ನಿಜವಾಗಿಯೂ ಮಕ್ಕಳ ಶಿಕ್ಷಣದ ಮೊದಲನೆಯ ಹಂತ. ಈ ಶಿಕ್ಷಣವು ಮಕ್ಕಳಲ್ಲಿ ವೈಯಕ್ತಿಕ ಪ್ರಜ್ಞೆಯನ್ನು ಬೆಳಸಿ ಅವರು ಸ್ವಾತಂತ್ರ್ಯವನ್ನು ಪ್ರೀತಿಸುವಂತೆ ಮಾಡುತ್ತದೆ. ಮಗುವು ತಾಯಿಯ ಗರ್ಭದಲ್ಲಿರುವಾಗ ಅದಕ್ಕೆ ತನ್ನತನವಾಗಲೀ ವ್ಯಕ್ತಿಪ್ರಜ್ಞೆಯಾಗಲೀ ಇರುವುದಿಲ್ಲ. ಅದು ಹುಟ್ಟಿದ ಮೇಲೆ ಮೊದಲು ಭೌತಿಕ ವ್ಯಕ್ತಿತ್ವವನ್ನೂ, ಸುಮಾರು ಎರಡುವರೆ ವರ್ಷದ ನಂತರ ಅಹಂಭಾವ ಸ್ಫುರಿಸಿದ ಮೇಲೆ ಮಾನಸಿಕ ವ್ಯಕ್ತಿತ್ವವನ್ನೂ ಪಡೆಯುತ್ತದೆ. ಈ ಅಹಂಭಾವವನ್ನೂ ವ್ಯಕ್ತಿಭಾವವನ್ನೂ ಬಲಗೊಳಿಸುವುದೇ ಶಿಕ್ಷಣದ ಮೊದಲನೆಯ ಪಾಠ. ಮಗುವು ಏನಾದರೂ ಮಾಡಿದಾಗ ಅದನ್ನು ಪ್ರಶಂಸಿಸುವುದು, ಕರತಾಡನ ಮಾಡುವುದು ಇತ್ಯಾದಿಗಳ ಮೂಲಕ ತಂದೆ ತಾಯಿಗಳು ಮತ್ತು ಇತರರು ಅದರ ವ್ಯಕ್ತಿಭಾವವನ್ನೂ ಅಹಂಪ್ರಜ್ಞೆಯನ್ನೂ ಬಲಗೊಳಿಸಲು ಪ್ರಯತ್ನಿಸುತ್ತಾರೆ. ವ್ಯಕ್ತಿತ್ವದ ಬೆಲೆಯನ್ನೂ, ಸ್ವಾತಂತ್ರ್ಯವನ್ನೂ ಘನತೆಯನ್ನೂ ಬೆಳಸಿಕೊಳ್ಳುವುದು ಆಧ್ಯಾತ್ಮಿಕ ಬೆಳವಣಿಗೆಯ ಮೊದಲ ಹಂತ.

ನೀವು ಒಬ್ಬರು ವ್ಯಕ್ತಿ, ಕೇವಲ ಒಂದು ಅಂಶವಲ್ಲ, ಬೇರೊಬ್ಬರ ಒಂದು ಭಾಗವಲ್ಲ, ನಿಮ್ಮದೇ ವೈಶಿಷ್ಟ್ಯದಿಂದ ಕೂಡಿದ ಒಬ್ಬರು ವ್ಯಕ್ತಿ—ಈ ರೀತಿ ಒತ್ತಿಹೇಳುವುದರ ಮೂಲಕ ಮಕ್ಕಳು ಮಾನವ

ಪರಿಸರದಲ್ಲಿ ತಮ್ಮ ವ್ಯಕ್ತಿಭಾವವನ್ನು ಬೆಳೆಸಿಕೊಳ್ಳುವಂತೆ ಮಾಡಬಹುದು.

ಮಗುವು ವೈಯಕ್ತಿಕತೆಯನ್ನು ಬೆಳೆಸಿಕೊಳ್ಳುವಂತೆ ಮಾಡುವುದು ಶಿಕ್ಷಣದ ಮೊದಲನೆಯ ಹಂತ. ಆದರೆ ಈ ಶಿಕ್ಷಣ ಇಲ್ಲಿಗೇ ನಿಲ್ಲದೆ ಮುಂದಿನ ಹಂತಗಳನ್ನು ತಲುಪಬೇಕು. ಹೀಗೆ ಶಿಕ್ಷಣದ ವಿವಿಧ ಹಂತಗಳ ಮೂಲಕ ಮಗುವು ತನ್ನ ಅನಂತ ಸಾಧ್ಯತೆಗಳನ್ನು ಅಭಿವ್ಯಕ್ತಗೊಳಿಸುವಂತಾಗಬೇಕು. ಈ ಉನ್ನತ ಶಿಕ್ಷಣವು ಮಗುವಿನ ಪ್ರಜ್ಞೆಯು ಜೈವಿಕ ಮಿತಿಯನ್ನು ಮೀರಿ ಉನ್ನತೋನ್ನತ ಆಧ್ಯಾತ್ಮಿಕ ಸ್ತರಗಳನ್ನು ತಲುಪಲು ಸಹಾಯ ಮಾಡುತ್ತದೆ.

## ಮಾನವೀಯತೆಯ ವಿಕಾಸ

ಮಗುವಿನ ಬೆಳವಣಿಗೆಯ ಎರಡನೆಯ ಹಂತವೇ ಮಾನವೀಯತೆ. ವೈಯಕ್ತಿಕ ಹಂತದಲ್ಲಿ ವ್ಯಕ್ತಿಯು ಅಹಂ-ಕೇಂದ್ರೀಕೃತವಾದ ದೇಹೇಂದ್ರಿಯ ಮನೋಭೂಮಿಕೆಯಲ್ಲಿ ಮಾತ್ರ ಇರುತ್ತಾನೆ. ಮಾನವೀಯತೆಯ ಹಂತದಲ್ಲಿ ಅವನ ಅಹಂಭಾವವು ವೈಯಕ್ತಿಕ ಪರಿಧಿಯನ್ನು ಮೀರಿ ವಿಕಾಸ ಹೊಂದುತ್ತದೆ ಮತ್ತು ಸಮಾಜದ ಇತರ ವ್ಯಕ್ತಿಗಳನ್ನು ಅದು ಒಳಗೊಳ್ಳುತ್ತದೆ. ದೇಹೇಂದ್ರಿಯ ಮನಸ್ಸುಗಳ ಪರಿಧಿಯನ್ನು ಮೀರಿ ಪ್ರಜ್ಞೆಯು ವಿಕಾಸಹೊಂದಿದಾಗ ವ್ಯಕ್ತಿಯು ನಿಜವಾದ ಮಾನವನಾಗುತ್ತಾನೆ. ಆದ್ದರಿಂದಲೆ ಟೀಲ್‌ಹಾರ್ಡ್ ಡಿ. ಚಾರ್ಡಿನ್‌ರ *The Phenomenon of Man* ಎಂಬ ಗ್ರಂಥದ ಪೀಠಿಕೆಯಲ್ಲಿ (ಪು.೩೦) ಜೂಲಿಯನ್ ಹಕ್ಸ್ಲೆ ಹೀಗೆ ಹೇಳುತ್ತಾರೆ : "ತನ್ನ ದೇಹಸಂಬಂಧವಾದ ವ್ಯಕ್ತಿತ್ವವನ್ನು ಮೀರಿ ಮಾನವಸಮಾಜದಲ್ಲಿ ಭಾಗಿಯಾದಾಗ ವ್ಯಕ್ತಿಯು ನಿಜವಾದ ಮಾನವನಾಗುತ್ತಾನೆ."

ಆತ್ಮ-ಪ್ರಜ್ಞೆಯು ಸಮಾಜದ ಇತರ ಆತ್ಮ-ಪ್ರಜ್ಞಾ ಕೇಂದ್ರಗಳೊಡನೆ ಸಹಭಾಗಿಯಾದಾಗ ಅದು ಜೈವಿಕ ಅಸ್ತಿತ್ವದ ಮಿತಿಯನ್ನು ಮೀರಿಹೋಗುತ್ತದೆ. ಈ ವಿಕಾಸವೇ ನಮ್ಮನ್ನು ಉನ್ನತ ವ್ಯಕ್ತಿಗಳನ್ನಾಗಿ ಮಾರ್ಪಡಿಸುವುದು. 'ನಮ್ಮನ್ನು ನಾವು ಉನ್ನತಿಗೇರಿಸಿಕೊಳ್ಳದಿದ್ದರೆ ಮಾನವ ಎಷ್ಟು ಅಲ್ಪನಾಗಿ ಉಳಿಯುತ್ತಾನೆ!'—ಎಂದು ಇಂಗ್ಲಿಷ್ ಕವಿ ವರ್ಡ್ಸ್‌ವರ್ತ್ ಹೇಳುತ್ತಾನೆ.

ಅಲ್ಪಾತ್ಮವು ಶ್ರೇಷ್ಠಾತ್ಮವಾಗಿ ಬೆಳೆಯುವುದು, ಅಥವಾ ಪ್ರಾಪ್ತವಾಗಿರುವ ಅಲ್ಪಾತ್ಮವನ್ನು ನಿಷೇಧಿಸಿ ಉನ್ನತಾತ್ಮದ ಆವಿರ್ಭಾವ—ಇದೇ ವೈಯಕ್ತಿಕತೆಯಿಂದ ಮಾನವೀಯತೆಯೆಡೆಗೆ ಮುನ್ನಡೆ. ಈ ಮುನ್ನಡೆಯನ್ನು ಸಾಧಿಸಿದಾಗಲೇ ವ್ಯಕ್ತಿಯು ಸಮಾಜದಲ್ಲಿ ಪರಸ್ಪರ ಸುಖಪ್ರದ ಸಂಬಂಧದಿಂದ ಬಾಳಲು ಸಾಧ್ಯ. ಇತರರನ್ನು ಪ್ರೀತಿಸುವುದು, ಇತರರ ಪ್ರೀತಿಗೆ ಪಾತ್ರರಾಗುವುದು—ಇದು ಈ ಬೆಳವಣಿಗೆಯಿಂದ ಮಾತ್ರ ಸಾಧ್ಯ. ವೈಯಕ್ತಿಕತೆಯ ಶಕ್ತಿ ಮತ್ತು ಸ್ವಾತಂತ್ರ್ಯಕ್ಕೆ ಜವಾಬ್ದಾರಿಯ ಪ್ರಜ್ಞೆಯನ್ನೂ ಮಾನವೀಯ ಪ್ರತಿಸ್ಪಂದನವನ್ನೂ ಸೇರಿಸಿದಾಗ ಮಾತ್ರ ಇದು ಸಾಧ್ಯ. ಕೇವಲ ಶಕ್ತಿಶಾಲಿಯಾದ ವ್ಯಕ್ತಿಯನ್ನು ಬರ್ಟ್ರಾಂಡ್ ರಸೆಲ್ ಬಿಲಿಯರ್ಡ್ ಬಾಲಿಗೆ ಹೋಲಿಸುತ್ತಾರೆ. ಒಂದು ಬಿಲಿಯರ್ಡ್ ಬಾಲ್ ಮತ್ತೊಂದು ಬಿಲಿಯರ್ಡ್ ಬಾಲ್ ಇವುಗಳಿಗೆ ಇರಬಹುದಾದ ಏಕಮಾತ್ರ ಸಂಬಂಧ ಘರ್ಷಣೆ. ಹಾಗೆಯೇ ಬಲಶಾಲಿ ಮತ್ತು ಸ್ವತಂತ್ರ ವ್ಯಕ್ತಿಗಳು ಪರಸ್ಪರ ಸಂಘರ್ಷಿಸುತ್ತಾರೆ. ಪರಸ್ಪರ ಭಾವ ವಿನಿಮಯ, ಭಾವನಾತ್ಮಕ ಸಂಬಂಧ, ಪರಸ್ಪರರಲ್ಲಿ ಪ್ರೀತಿಯನ್ನು ಕೆರಳಿಸುವುದು, ಇತರರೊಡನೆ ಶಾಂತಿ ಸೌಹಾರ್ದತೆಯಿಂದ ಬಾಳುವುದು—ಇವು ಸಾಧ್ಯವಾಗಬೇಕಾದರೆ **ಮಾನವನು ವೈಯಕ್ತಿಕತೆಯಿಂದ ಮಾನವೀಯತೆಯೆಡೆಗೆ ಬೆಳೆಯಬೇಕು.** ಇದು ಆಧ್ಯಾತ್ಮಿಕ ಬೆಳವಣಿಗೆ, ಕೇವಲ ಭೌತಿಕ ಮತ್ತು ಬೌದ್ಧಿಕ ಬೆಳವಣಿಗೆಯಲ್ಲ—ಏಕೆಂದರೆ ಇದು ಜೈವಿಕ ಮಿತಿಗಳನ್ನು ಮೀರಿ ಹೋಗುವುದಾಗಿದೆ. ವೈಯಕ್ತಿಕತೆಯಿಂದ ಮಾನವೀಯತೆಯೆಡೆಗೆ ಬೆಳೆಯುವ ಮಾನವ ವಿಕಾಸದ ಈ ಎರಡನೆಯ ಹಂತವನ್ನು ಪ್ರತಿಯೊಬ್ಬನೂ ತಲುಪದಿದ್ದರೆ ಈ ಜಗತ್ತಿನಲ್ಲಿ ಶಾಂತಿ ಮತ್ತು ಸಮನ್ವಯ ನೆಲೆಸಲಾರದು.

## ಮಾನವೀಯತೆಯ ಬೆಳವಣಿಗೆಯೇ ಶಿಕ್ಷಣದ ಗುರಿ

ಈ ಬೆಳವಣಿಗೆಯ ಮೂಲಕ ಮಾನವ ಪ್ರಜ್ಞೆಯು ವಿಶಾಲವೂ ಸೃಜನಾತ್ಮಕವೂ ಆಗುತ್ತದೆ. ಪ್ರತಿ ಮಾನವನೂ ಕೊನೆಯ ಪಕ್ಷ ಈ ಮನೋ-ಸಾಮಾಜಿಕ ವಿಕಾಸದ ಹಂತವನ್ನಾದರೂ ತಲುಪಬೇಕು, ಹಾಗೂ ಕುಟುಂಬ, ಶಾಲೆ, ಸಮಾಜದಲ್ಲಿ ದೊರೆಯುವ ಶಿಕ್ಷಣ ಮತ್ತು ಎಲ್ಲ ಧರ್ಮಗಳು ಈ ಗುರಿಯನ್ನು ಸಾಧಿಸುವತ್ತ ಗಮನ ಕೊಡಬೇಕು.

ಈ ಮಾನವೀಯತೆಯ ಬೆಳವಣಿಗೆಯಲ್ಲಿ ಆಯಾಯ ವ್ಯಕ್ತಿಯು ಸಮಾಜದೊಡನೆ ಸ್ಪಂದಿಸುವ ಸಾಮರ್ಥ್ಯಕ್ಕನುಸಾರವಾಗಿ ಹಲವು ಹಂತಗಳಿವೆ. ಈ ಮಾನವ ಬೆಳವಣಿಗೆಯಲ್ಲಿ ಬುಡಕಟ್ಟು, ಜನಾಂಗದ ಹಂತವಿದೆ, ರಾಷ್ಟ್ರೀಯ ಹಂತವಿದೆ, ಇಂದು ಅಂತರ ರಾಷ್ಟ್ರೀಯ ಹಂತವಿದೆ. ಆಧುನಿಕ ಪರಿಸ್ಥಿತಿಯಲ್ಲಿ ನಾವೆಲ್ಲರೂ ನೆರೆಹೊರೆಯ ಅಡೆತಡೆಗಳನ್ನೆಲ್ಲ ಕತ್ತರಿಸಿ, ಮಾನವಕೋಟಿಯ ಪ್ರಜ್ಞೆಯನ್ನು ಮಾನವಕೋಟಿಯ ಸಹಾನುಭೂತಿಯನ್ನು, ಅಷ್ಟೇ ಅಲ್ಲದೆ ಪ್ರಾಣಿ ಮತ್ತು ಸಸ್ಯವರ್ಗಗಳನ್ನು ಆದರಿಸುವ ಮನೋವೈಶಾಲ್ಯತೆಯನ್ನು ಬೆಳೆಸಿಕೊಳ್ಳಬೇಕಾಗಿದೆ.

ಇವೆಲ್ಲವೂ ಮಾನವ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕಾರ್ಯಕಾರಿ ಹೇಳಿಕೆಗಳು. ನಾವೊಂದು ಚಿಕ್ಕ ಗ್ರಹದಲ್ಲಿದ್ದೇವೆ. ಇಲ್ಲಿ ನಾವೆಲ್ಲರೂ ಆಧುನಿಕ ತಾಂತ್ರಿಕತೆಯ ಮೂಲಕ ಅತ್ಯಂತ ಸಮೀಪವರ್ತಿಗಳಾಗಿದ್ದೇವೆ. ಶಾಂತಿ ನೆಮ್ಮದಿಯಿಂದ ಸಾರ್ಥಕ ಜೀವನವನ್ನು ನಡೆಸಬೇಕಾದರೆ ನಾವು ಮನೋ-ಸಾಮಾಜಿಕ ಆಯಾಮದಲ್ಲಿ ವಿಕಾಸವನ್ನು ಸಾಧಿಸಲೇಬೇಕಾಗಿದೆ.

ಆದ್ದರಿಂದ ಮಾನವ ಬೆಳವಣಿಗೆಯ ದಿಕ್ಕು ಬದಲಾಯಿಸಬೇಕು. ಈ ದಿಕ್ಕು ಬಹಿರ್ಮುಖವಲ್ಲ, ಅಂತರ್ಮುಖ. ಇದು ಆಂತರಿಕ ಬೆಳವಣಿಗೆ. ಆದರೆ ಇದು ಬಾಹ್ಯದಲ್ಲಿ ಪ್ರೀತಿ, ದಯೆ, ಸೇವೆ ಮತ್ತು ಸಮರ್ಪಣೆ ಮುಂತಾದ ಸಮನ್ವಯ ಶಕ್ತಿಗಳಾಗಿ ವ್ಯಕ್ತವಾಗುತ್ತದೆ. ಈ ರೀತಿ ಪ್ರಜ್ಞೆಯನ್ನು ಉನ್ನತ ಸ್ತರಕ್ಕೆ ಏರಿಸುವುದು ಅತ್ಯಂತ ಮುಖ್ಯ. ಶಿಕ್ಷಣದ ಗುರಿಯನ್ನೂ ವಿಧಾನವನ್ನೂ ಹೊಸ ರೀತಿಯಲ್ಲಿ ರೂಪಿಸುವುದರ ಮೂಲಕ ನಾವು ಇದನ್ನು ಸಾಧಿಸಬೇಕಾಗಿದೆ. ✳